# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5006/2025 ಫ್ರಾಸಾ-01

ಚಾಸಾ-01

ದಿನಾಂಕಃ 02-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಸದಾಶಿವ |
| **ತಂದೆಯ / ಗಂಡನ ಹೆಸರು** | ತಿಪ್ಪೆಸ್ವಾಮಿ |
| **ವಯಸ್ಸು** | 54 |
| **ಉದ್ಯೋಗ** | ಚಿಲ್ಲರೆ ಅಂಗಡಿ |
| **ವಾಸಸ್ಥಳ** | ಪೊನ್ನಸಮುದ್ರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-2 ನನ್ನ ಹೆಂಡತಿ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಊರಿನವರು, ಅವರ ಪರಿಚಯ ಇರುತ್ತದೆ. ನಾನು ಬಸ್ ಸ್ಟಾಂಡ್ ನಲ್ಲಿ ಪೆಟ್ಟಿಗೆ ಅಂಗಡಿ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ಮೊದಲು ನಾವು ಪ್ರಸನ್ನ ಕುಮಾರ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದೇವು ನನ್ನ ಪೆಟ್ಟಿಗೆ ಅಂಗಡಿ ಕೂಡ ಪಕ್ಕದಲ್ಲಿಯೇ ಇತ್ತು. ಪ್ರಸನ್ನ ಕುಮಾರ್ ರವರು ನನಗೆ ಮನೆ ಖಾಲಿ ಮಾಡಲು ಹೇಳಿದ್ದರಿಂದ ನಾನು ಅಮರನಾಥ್ ರವರಿಗೆ ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಜಾಗ ಕೇಳಿದ್ದೆ ಅವರು ಒಪ್ಪಿಕೊಂಡಿದ್ದರು ಆದರೆ ಆರೋಪಿತರು ಅದಕ್ಕೆ ತಕರಾರು ಮಾಡಿರುತ್ತಾರೆ. ಏಕೆಂದರೆ ಆರೋಪಿತರ ಅಂಗಡಿ ಕೂಡ ಅಲ್ಲಿಯೇ ಇತ್ತು. ಆರೋಪಿತರು ನನಗೆ ಅಂಗಡಿ ಇಲ್ಲಿ ಹಾಕಬೇಡಿ ಹಾಕಿದರೆ ನಾವು ಒಳ್ಳೆ ಜನರು ಅಲ್ಲ ಹುಷಾರ್ ಎಂದು ಬೆದರಿಸಿರುತ್ತಾರೆ. ವೀರಣ್ಣ ರವರಿಂದ 10-12 ಸಾವಿರ ರೂಪಾಯಿಗೆ ಪೆಟ್ಟಿಗೆ ಅಂಗಡಿ ಖರೀದಿಸಿ ಬಸ್ ಸ್ಟಾಂಡ್ ಬಳಿ ಇರುವ ಅಮರನಾಥ್ ರವರ ಜಾಗದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟಿದ್ದೆ.

ದಿ. 22/23.07.2023 ರಂದು ರಾತ್ರಿ 3-00 ಗಂಟೆ ಸುಮಾರಿಗೆ ನಮ್ಮ ಊರಿನವರು ಪೆಟ್ಟಿಗೆ ಅಂಗಡಿಗೆ ಬೆಂಕಿ ಬಿದ್ದಿದೆ ನೀವು ಇಲ್ಲೆ ಇದ್ದೀರಾ ಎಂದು ನಾವು ವಾಸ ಮಾಡುವ ಹೊಸ ಮನೆಗೆ ಬಂದು ಹೇಳಿದರು. ನಮ್ಮ ಮನೆಯಿಂದ ಪಟ್ಟಿಗೆ ಅಂಗಡಿಗೆ ಹೊಗಲು 5 ನಿಮಿಷ ಬೇಕಾಗುತ್ತದೆ. ನಾನು ಸ್ಥಳಕ್ಕೆ  ಹೋಗಿ ನೋಡಲಾಗಿ ಪೆಟ್ಟಿಗೆ ಅಂಗಡಿ ಹಿಂಭಾಗದಲ್ಲಿ ಆರೋಪಿತರು ಇದ್ದರು ಮತ್ತು ಅಂಗಡಿ ಪೂರ್ತಿ ಸುಟ್ಟು ಹೋಗಿತ್ತು. ನಂತರ ನಾನು ಪೊಲೀಸರಿಗೆ ಮದ್ಯಾಹ್ನ 12-30 ಗಂಟೆಗೆ ಪಿರ್ಯಾದಿ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ಪಿರ್ಯಾದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು ಟೈಪ್ ಮಾಡಿಕೊಂಡು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸ್ಥಳದಿಂದ ಬೀಗ ಸಮೇತ ಚೀಲಕವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನ್ಯಾಯಾಲಯದಲ್ಲಿರುವ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸದರಿ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಬೀಗ ಸಮೇತ ಚೀಲಕ ನೋಡಿ ಗುರುತಿಸಿದ್ದು ಸದರಿ ಬೀಗ ಸಮೇತ ಚೀಲಕವನ್ನು ಮು.ಮಾ-1 ಎಂದು ಗುರುತಿಸಲಾಯಿತು.  ಪೆಟ್ಟಿಗೆ ಅಂಗಡಿ ಪಕ್ಕ ಪ್ರಸನ್ನ ರವರಿಗೆ ಸೇರಿದ ಒಂದು ರೂಂ ಇದ್ದು ಅದರಲ್ಲಿ ನಾವು ಸಿಲೆಂಡರ್ ಇಟ್ಟಿದ್ದೇವು. ಸದರಿ ರೂಂ ನ ಬಾಗಿಲಿಗೂ ಬೆಂಕಿ ಹಚ್ಚಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ದೂರು ಕೊಟ್ಟಿರುತ್ತೇನೆ. ಈ ಘಟನೆಯಿಂದ ನನಗೆ ಒಂದು ಲಕ್ಷಕ್ಕಿಂತ ಹೆಚ್ಚು ನಷ್ಟವಾಗಿರುತ್ತದೆ. ಈ ಘಟನೆಗೆ ಆರೋಪಿತರೇ ಕಾರಣರಾಗಿರುತ್ತಾರೆ.

**<u>ಪಾಟೀಸವಾಲು ಶ್ರೀ. ಎಸ್.ಸಿ.ಜಿ. ವಕೀಲರಿಂದ ಆರೋಪಿತರ ಪರವಾಗಿ:-</u>**

ಆರೋಪಿತರಿಗೂ ಮತ್ತು ನಮ್ಮ ನಡುವೆ ಈ ಘಟನೆಗಿಂತ ಮೊದಲು ಯಾವುದೇ ಗಲಾಟೆ ಇರಲಿಲ್ಲ. ಆರೋಪಿತರ ಅಂಗಡಿ ವೆ.ಎನ್.ಹೊಸಕೋಟೆ - ಪಾವಗಡ ಮುಖ್ಯ ರಸ್ತೆಯಲ್ಲಿ ಇರುತ್ತದೆ ಎಂದರೆ ನಿಜ. ಆರೋಪಿತರ ಅಂಗಡಿಯ ಎಡ ಭಾಗದಲ್ಲಿ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗುವ ಅಗಲದ ಒಂದು ರಸ್ತೆ ಇರುತ್ತದೆ ಎಂದರೆ ನಿಜ. ಸದರಿ ದಾರಿಯ ಎಡಭಾಗದಲ್ಲಿ ಗೌರಜ್ಜಿರವರ ರೂಂ ಮತ್ತು ಕಲ್ಯಾಣ ಮಂಟಪ (ಛತ್ರ) ಇರುತ್ತದೆ ಎನ್ನುವುದು ನಿಜ. ನಾನು ಛತ್ರದ ಪಕ್ಕದಲ್ಲಿರುವ ಮನೆಯಲ್ಲಿ ಬಾಡಿಗೆಗೆ ಇದ್ದೆ. ಸದರಿ ಮನೆಯಲ್ಲಿಯೇ ಕಾಫಿ , ಟೀ, ಪೆಟ್ರೋಲ್ ಡೀಸೇಲ್, ಬೀಡಿ, ಸಿಗರೇಟು ವ್ಯಾಪಾರ ಮಾಡುತ್ತಿದ್ದೆ ಎನ್ನುವುದು ನಿಜ. ನನ್ನ ಅಂಗಡಿ ನಡೆಸುವುದಕ್ಕೆ ಪಂಚಾಯಿಂದ ಪರವಾನಿಗೆ ಇರುತ್ತದೆ ನಾನು ಅದನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನಾನು ವಾಸ ಮಾಡುತ್ತಿರುವ ಸದರಿ ಮನೆಗೆ ಬೆಂಕಿ ಬಿದ್ದಿರುತ್ತದೆ ಇದರಿಂದ ಮನೆ ಬಾಗಿಲು ಸುಟ್ಟು ಹೋಗಿರುತ್ತದೆ ಎನ್ನುವುದು ನಿಜ. ಸದರಿ ಬೆಂಕಿ ಬಿದ್ದಿರುವುದರಿಂದ ಗೌರಜ್ಜಿ ಮೊಮ್ಮಗ ಪ್ರಸನ್ನ ನಿಮ್ಮಿಂದಲೇ ಮನೆಗೆ ಬೆಂಕಿ ಬಿದ್ದಿರುತ್ತದೆ ನೀವು ಮನೆ ಖಾಲಿ ಎಂದು ಹೇಳಿ ಮನೆ ಖಾಲಿ ಮಾಡಿಸಿರುತ್ತಾನೆ ಎನ್ನುವುದು ನಿಜ.

ಈ ಘಟನೆಯಾದ ಸ್ವಲ್ಪ ದಿನಗಳ ನಂತರ ಆರೋಪಿತರ ಮನೆಯ ಹತ್ತಿರ ಬೆಂಕಿ ಬಿದ್ದು ಚಪ್ಪರ ಸುಟ್ಟು ಒಂದು ಬೈಕ್ ಸುಟ್ಟಿರುತ್ತದೆ ಎನ್ನುವುದು ನಿಜ. ನಮ್ಮ ಮನೆಗೆ ಮತ್ತು ಆರೋಪಿತರ ಮನೆಗೆ ಒಟ್ಟು ಎರಡು ಬೆಂಕಿ ಬಿದ್ದ ಪ್ರಕರಣ ನಮ್ಮ ಊರಿನಲ್ಲಿ ಆಗಿರುತ್ತದೆ. ಆರೋಪಿತರ ಹೋಟೆಲ್ ಚೆನ್ನಾಗಿ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ವೀರಣ್ಣನ ಪೆಟ್ಟಿಗೆ ಅಂಗಡಿಯ ಮೇಲ್ಹಾವಣಿ ಕಿತ್ತು ಹೋಗಿತ್ತು ಎಂದರೆ ಸ್ವಲ್ಪ ಸ್ವಲ್ಪ ಕಿತ್ತು ಹೋಗಿತ್ತು. ಸದರಿ ಪೆಟ್ಟಿಗೆ ಅಂಗಡಿ ತುಂಬಾ ಹಳೇಯದು ಎನ್ನುವುದು ನಿಜ. ಸದರಿ ಪೆಟ್ಟಿಗೆ ಅಂಗಡಿಯನ್ನು 500/- ರೂ ಕೊಟ್ಟು ಆರೋಪಿಗಳು ಖರೀದಿ ಮಾಡಿ ಹೋಟೆಲ್ ನಲ್ಲಿ ಒಲೆ ಉರಿಯಲು ಬೇಕಾಗುತ್ತದೆ ಎಂದು ರಸ್ತೆಯ ಪಕ್ಕದಲ್ಲಿ ಇಟ್ಟುಕೊಂಡಿದ್ದರು ಎಂದರೆ ಸುಳ್ಳು. ಸದರಿ ಪೆಟ್ಟಿಗೆ ಅಂಗಡಿ ವೀರಭ್ರದೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಆರೋಪಿತರ ಹೋಟೆಲ್ ಪಕ್ಕದಲ್ಲಿ ದಾರಿಯಲ್ಲಿ ಸುಟ್ಟಿರುತ್ತದೆ ಎಂದರೆ ನಿಜ. ಆರೋಪಿತರು ಸದರಿ ಪೆಟ್ಟಿಗೆ ಅಂಗಡಿಯನ್ನು ಉರುವಲಿಗಾಗಿ ಇಟ್ಟುಕೊಂಡಿದ್ದರು ನಾನೇ ಬೆಂಕಿ ಹಚ್ಚಿ ಸುಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಪೆಟ್ಟಿಗೆ ಅಂಗಡಿ ಯಾವ ಸರ್ವೆ ನಂಬರ್ ಜಮೀನಿನಲ್ಲಿ ಇಟ್ಟಾಗ ಸುಟ್ಟಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಪ್ರಸನ್ನ ಕುಮಾರ್ ರವರ ಅನುಮತಿ ಪಡೆದುಕೊಂಡಿದ್ದೆ. ಈ ಬಗ್ಗೆ ನನ್ನ ಮತ್ತು ಪ್ರಸನ್ನ ಕುಮಾರ್ ರವರ ಮಧ್ಯೆ ಯಾವುದೇ ಕರಾರು ಆಗಿರುವುದಿಲ್ಲ. ಸದರಿ ಪೆಟ್ಟಿಗೆ ಅಂಗಡಿಯನ್ನು 12 ಸಾವಿರ ರೂಪಾಯಿಗೆ ಖರೀದಿ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಪೆಟ್ಟಿಗೆ ಅಂಗಡಿ 6 ಅಡಿ ಎತ್ತರ 6 ಅಡಿ ಅಗಲ ಇತ್ತು. ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆಯ ಅಗಲ 5-6 ಅಡಿ ಇರುತ್ತದೆ ಎನ್ನುವುದು ನಿಜ. ನಾನು ಖರೀದಿ ಮಾಡಿರುವ 6 ಅಡಿ ಪೆಟ್ಟಿಗೆ ಅಂಗಡಿ ಸದರಿ ದಾರಿಯಲ್ಲಿ ಇಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಖರೀದಿ ಮಾಡಿದ ಹಳೇ ಪೆಟ್ಟಿಗೆ ಅಂಗಡಿಯನ್ನು ಮುರಿದು ಕಟ್ಟಿಗಳನ್ನು ದಾರಿ ಪಕ್ಕದಲ್ಲಿ ಜೊಡಿಸಿ ಇಟ್ಟಿದ್ದರು ಎಂದರೆ ಸುಳ್ಳು. ಸದರಿ ಪೆಟ್ಟಿಗೆ ಅಂಗಡಿ ವೀರಣ್ಣನ ಸೊಸೆ ರಮಾದೇವಿ ರವರ ಮಾಲೀಕತ್ವಕ್ಕೆ ಸಂಬಂಧಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾರಿ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿ ಮೃತ್ಯುಂಜ ಮತ್ತು ನಲ್ಲಪ್ಪ ರವರಿಗೆ ಸೇರಿದ ಜಮೀನು ಎಂದರೆ ನಿಜ, ಸದರಿ ಜಮೀನಿನಲ್ಲಿ ಆರೋಪಿತರು ಹೊಟೆಲ್ ಇಟ್ಟುಕೊಂಡಿರುತ್ತಾರೆ ಎಂದರೆ ನಿಜ. ಸರ್ವೆ ನಂ-7/2 ರಲ್ಲಿ ಆರೋಪಿತರ ಹೋಟೆಲ್ ಮತ್ತು ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮೃತ್ಯುಂಜಯ ಮತ್ತು ನಲ್ಲಪ್ಪ ನನಗೆ ಯಾವುದೇ ಪರವಾನಿಗೆಯನ್ನು ನನ್ನ ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಕೊಟ್ಟಿರುವುದಿಲ್ಲ ಎಂದರೆ ನಾನು ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿರುವ ಜಾಗ ಅವರಿಗೆ ಸೇರಿದ್ದು ಆಗಿರುವುದಿಲ್ಲ.

ನಿಪಿ-1 ದೂರನ್ನು ನಾನೇ ಹೇಳಿದ ಮೇರೆಗೆ ಪೋಲೀಸರು ಬರೆದಿರುತ್ತಾರೆ. ವೀರಣ್ಣನ ಹತ್ತಿರ ಒಂದೇ ಹಳೇಯ ಪೆಟ್ಟಿಗೆ ಅಂಗಡಿ ಇತ್ತು. ನಾನು ಪೆಟ್ಟಿಗೆ ಅಂಗಡಿಯನ್ನು ಆರೋಪಿತರ ಹೋಟೆಲ್ ಪಕ್ಕದಲ್ಲಿ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಅಂಗಡಿ ಇಟ್ಟುಕೊಂಡಿರುವ ದಾರಿಯಲ್ಲಿ ಅಂಗಡಿ ಇಟ್ಟುಕೊಂಡರೆ ದಾರಿ ಬಂದ್ ಆಗುತ್ತದೆ ಎಂದರೆ ಸುಳ್ಳು. ನಮ್ಮ ಅಂಗಡಿ ಪಕ್ಕದಲ್ಲಿ ನಾವೇ ಹೊಸದಾಗಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದೇವು. ಶೀಟ್ ಅಂಗಡಿ ಎಂದು ನಾನು ಪಿರ್ಯಾದಿಯಲ್ಲಿ ಹೇಳಿಲ್ಲ ಎನ್ನುವುದು ನಿಜ. ಹೊಸ ಅಂಡಿಯ ಎಂದು ನಾನು ಪಿರ್ಯಾದಿಯಲ್ಲಿ ಹೇಳಿರುವುದು ನಾನು ವೀರಣ್ಣನ ಹತ್ತಿರ ಕೊಂಡು ಅಂಗಡಿ. ವೀರಣ್ಣನ ಸೊಸೆಯ ಹತ್ತಿರ ಒಂದು ಅಂಗಡಿ ಇದ್ದು ಅದನ್ನು ಆರೋಪಿತರಿಗೆ ಮಾರಾಟ ಮಾಡಿರುತ್ತಾರೆ ಎನ್ನುವುದು ಸುಳ್ಳು.

ನಾನು ಪಿರ್ಯಾದಿಯಲ್ಲಿ 10 ಸಾವಿರಕ್ಕೆ ಪೆಟ್ಟಿಗೆ ಅಂಗಡಿ ಖರೀದಿಸಿರುತ್ತೇನೆ ಎಂದು ಹೇಳಿರುವುದು ನಿಜ. ಪೆಟ್ಟಿಗೆ ಅಂಗಡಿ ಇರುವ ಜಾಗ ಪ್ರಸನ್ನ ರವರಿಗೆ ಸೇರಿದ್ದಲ್ಲ ಮತ್ತು ಅವರಿಗೆ ಸಂಬಂಧಪಟ್ಟ ಯಾವುದೇ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಕೃತ್ಯ ನಡೆದ ಸ್ಥಳದ ಪಂಚನಾಮೆಗೆ ಬಂದಾಗ ಮು.ಮಾ-1 ನ್ನು ಸ್ಥಳದಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ ಸದರಿ ಬೀಗ ನನ್ನದೇ ಇರುತ್ತದೆ. ಪೆಟ್ಟಿಗೆ ಅಂಗಡಿ ಆರೋಪಿತರು ಮುರಿದು ಹಾಕಿದ್ದರಿಂದ ಬೀಗ ಮತ್ತು ಚಿಲಕ ಕೆಳಗೆ ಬಿದ್ದಿತ್ತು ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ಮತ್ತು ನಮ್ಮ ನಡುವೆ ವೈಯಕ್ತಿ ದ್ವೇಷ ಇದ್ದು ಆರೋಪಿತರ ಮನೆಗೆ ನಾನೇ ಬೆಂಕಿ ಬಿದ್ದಾಗ ನಾನೇ ಬೆಂಕಿ ಹಚ್ಚಿದ್ದೇನೆಂದು ನನ್ನ ಮೇಲೆ ಅಪಾದನೆ ಮಾಡಿದ್ದರಿಂದ ನನಗೆ ಅವರ ಮೇಲೆ ವೈಯಕ್ತಿಕ ದ್ವೇಷ ಇರುವುದರಿಂದ ನಾನು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳಕ್ಕೆ ಹೋದಾಗ 2-30 ಜನರು ಅಲ್ಲಿ ಇದ್ದರು. ನಾನು ಯಾರು ಬೆಂಕಿ ಹಚ್ಚಿದವರು ಯಾರು ಎಂದು ನಾನು ನೋಡಿರುವುದಿಲ್ಲ ನಾನು ಸ್ಥಳಕ್ಕೆ ಹೋದಾಗ ಆರೋಪಿತರು ಅಲ್ಲಿಯೇ ಇದ್ದರು. ನನ್ನ ಪೆಟ್ಟಿಗೆ ಅಂಗಡಿ ರಸ್ತೆಯ ಒಂದು ಬದಿಗೆ ಇದ್ದು ಆರೋಪಿತರು ಹೋಟೆಲ್ ಇನ್ನೊಂದು ಬದಿಗೆ ಇರುತ್ತದೆ. ಆರೋಪಿತರು ಹೋಟೆಲ್ ಹತ್ತಿರ ಇದ್ದರು ಎಂದರೆ ಸರಿಯಲ್ಲ. ನಾನು ಪೆಟ್ಟಿಗೆ ಅಂಗಡಿ ಇಟ್ಟಿರುವ ಪ್ರಸನ್ನ ರವರ ಜಾಗಕ್ಕೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ನಿಜ. ಆರೋಪಿತರು ಪ್ರಸನ್ನಪ್ಪ ರವರ ಜಾಗದಲ್ಲಿ ಇಟ್ಟಿರುವ ಪೆಟ್ಟಿಗೆ ಅಂಗಡಿಗೆ ತೊಂದರೆ ಮಾಡಿರುತ್ತಾರೆಂದು ಪ್ರಸನ್ನಪ್ಪ ಆರೋಪಿತರ ವಿರುದ್ಧ ದೂರು ಕೊಟ್ಟಿರುವುದಿಲ್ಲ. ಪೊಲೀಸರ ಜೊತೆ ಶಾಮೀಲಾಗಿ ನಾನು ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**